ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ನಾಯನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: 19.08.16

ಈ ವಾರದ ಮುನ್ಸೂಚನೆ (20.08.16 to 24.08.16 ವರೆಗೆ)

ನಿಯತಾಂಕಗಳು	20.08.16	21.08.16	22.08.16	23.08.16	24.08.16
ಮಳೆ (ಮಿ ಮಿ)	0	0	0	0	4
ಗರಿಷ್ಠ ಉಷ್ಣಾಂಶ(ಡಿ.ಸೆ.)	30	29	30	31	30
ಕನಿಷ್ಠ ಉಷ್ಣಾಂಶ (ಡಿ.ಸೆ.)	20	20	20	20	20
ಮೋಡ (ಪ್ರಮಾಣ)	4	7	7	7	7
ಆರ್ದ್ರತೆ ೭.೨೦ ಬೆ (ಶೇ)	95	92	92	93	94
ಆರ್ದ್ರತೆ ೨.೨೦ ಮ (ಶೇ)	53	45	51	49	48
ಗಾಳಿಯ ವೇಗ (ಕಿ.ಮಿ/ಗಂಟೆಗೆ)	15	15	15	16	16
ಗಾಳಿಯ ದಿಕ್ಕು (ಡಿಗ್ರಿ)	283	291	292	291	283

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ **ನಾಯನಹಳ್ಳಿ** ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಹಗುರ ಮಳೆಯಾಗುವ ಸಾಧ್ಯತೆ ಇದೆ. ದಿನದ ಗರಿಷ್ಠ ಉಷ್ಣಾಂಶವು 29–31^{o}C ಮತ್ತು ಕನಿಷ್ಠ 20^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 92-95 % ಇದ್ದು, ಮಧ್ಯಾಹ್ನ 45-53 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 15-16 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಮಳೆಯ ಮುನ್ಸೂಚನೆ ಕಡಿಮೆ, ಹಾಗೂ ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ಆಗಸ್ಟ್ ನಾಲ್ಕನೇ ವಾರದ ವರೆಗೂ ಮಳೆಯ ಕೊರತೆ ಕಂಡುಬರುವ ಸಾಧ್ಯತೆ ಇರುವುದರಿಂದ ಮುಂಗಾರು ಬಿತ್ತನೆಯನ್ನು ಮುಂದೂಡುವುದು ಸೂಕ್ತ.
- ಹವಾಮಾನ ವರದಿಯ ಪ್ರಕಾರ ಗಾಳಿಯ ವೇಗವು ಹೆಚ್ಚಾಗಲಿರುವುದರಿಂದ ಟೊಮ್ಯಾಟೊ ಹಾಗೂ ಇನ್ನಿತರೆ ತರಕಾರಿ ಬೆಳೆಗಳಿಗೆ ರಕ್ಷಣೆ ಕೊಡುವುದು ಅತಿ ಮುಖ್ಯ.
- ದೀರ್ಘಾವಧಿ ಬೆಳೆಗಳು (ತೊಗರಿ ಮತ್ತು ಹರಳು) ಬಿತ್ತನೆ ಮಾಡಿದಲ್ಲಿ ಕಳೆ ನಿರ್ವಹಣೆ, ಮಣ್ಣು ಮತ್ತು ನೀರಿನ ಸಂರಕ್ಷಣೆಗೆ ಅಂತರ ಬೇಸಾಯವನ್ನು ಕೈಗೊಳ್ಳುವುದು.
- ತೇವಾಂಶದ ಸಂರಕ್ಷಣೆಗಾಗಿ ಕಿತ್ತಂತಹ ಕಳೆ ಮತ್ತು ಬದುಗಳಲ್ಲಿ ಬೆಳೆದಿರುವ ಗ್ಲಿರೀಸಿಡಿಯ (ಹಸಿರೆಲೆ ಗೊಬ್ಬರದ ಗಿಡ) ಸೊಪ್ಪನ್ನು ಉಪಯೋಗಿಸಿಕೊಂಡು ಸಾಲುಗಳ ಮಧ್ಯದಲ್ಲಿ ಭೂ–ಹೊದಿಕೆಯಾಗಿ ಹರಡುವುದು.
- ಕೃಷಿ ಹೊಂಡ, ನಾಲಾಬದು, ನಾಲಾ ಹೊಂಡಗಳಲ್ಲಿ ಶೇಖರಣೆ ಮಾಡಿದ ನೀರನ್ನು ಸದ್ಬಳಕೆ ಮಾಡಿಕೊಂಡು ಬೆಳೆ ರಕ್ಷಣಾತ್ಮಕ ನೀರಾವರಿಯನ್ನು ಕೊಡಬಹುದು.
- ಮಳೆಯ ಮುನ್ಸೂಚನೆ ಕಡಿಮೆ ಇರುವುದರಿಂದ ರಸಗೊಬ್ಬರಗಳ ಬಳಕೆ ಕಡಿಮೆ ಮಾಡಿ.
- ರಾಗಿ ಬೆಳೆಯಲ್ಲಿ ಸಸಿಗಳ ಸಂಖ್ಯೆಯನ್ನು ಶಿಪಾರಸ್ಸು ಮಾಡಿದ ಸಂಖ್ಯೆಯಲ್ಲಿ ಉಳಿಸಿಕೊಳ್ಳುವುದು ಇದರಿಂದ ತೇವಾಂಶ ಸದ್ಬಳಕೆಯಾಗುವುದು.

ಆಗಸ್ಟ್ ತಿಂಗಳಲ್ಲಿ ಬಿತ್ತನೆ ಮಾಡಬೇಕಾದ ಬೆಳೆಗಳು: ತೇವಾಂಶದ ಆಧಾರದ ಮೇಲೆ ಬಿತ್ತನೆ ಮಾಡಬೇಕು

ಮುಸುಕಿನ ಜೋಳ: ಗಂಗಾ–11, ಡೆಕ್ಕನ್–103, ವಿಜಯ ಕಾಂಪೋಸಿಟ್, ಕಾಂಪೋಸಿಟ್ ಎನ್.ಐ.ಸಿ–6004,6002, ನಿತ್ಯಶ್ರೀ–ಸಂಕರಣ ತಳಿ.

ರಾಗಿ: ಇಂಡಾಫ್–9, ಎಳ್ಳು : ನವಿಲೆ–1, ಟಿ–7, **ಅಲಸಂದೆ** : ಟಿ.ವಿ.ಎಕ್ಸ್–944, ಕೆ.ಬಿ.ಸಿ–1, **ಅವರೆ**: ಎಚ್.ಎ–3 ಮತ್ತು 4, **ಸೂರ್ಯಕಾಂತಿ**: ಮಾರ್ಡೆನ್, ಹೆಬ್ರಿಡ್ ತಳಿಗಳು:ಕೆ.ಬಿ.ಎಸ್.ಎಚ್–1, 41, 42, 44, 53.

ಸಸ್ಯ ಸಂರಕ್ಷಣೆ:

- ಥ್ರಿಪ್ಸ್/ಹೇನು/ಎಫಿಡ್ಸ್ ಹಾಗೂ ಇನ್ನಿತರೆ ರಸ ಹೀರುವ ಕೀಟಗಳ ನಿಯಂತ್ರಣಕ್ಕೆ ಆಕ್ಟ್ (೧ಗ್ರಾಂ/ಲೀ) ಅಥವಾ ಇಮಿಡಾಕ್ಲೋಪ್ರಿಡ್ (೨.೦ ಮಿ.ಲೀ/ಲೀ) ಅಥವಾ ಶೇ. ಆರಷ್ಟು ಬೇವಿನ ಕಷಾಯ/ಎಣ್ಣೆಯನ್ನುಸಿಂಪಡಣೆ ಮಾಡಬೇಕು.
- ಹೂ ಕೋಸು ಹಾಗೂ ಎಲೆ ಕೋಸುನಲ್ಲಿ ಎಲೆ ತಿನ್ನುವ ಹುಳು (ಡೈಮಂಡ್ ಬ್ಯಾಕ್ ಮಾತ್) ಕಂಡು ಬಂದಲ್ಲಿ ಬೇವಿನ ಕಷಾಯ/ಎಣ್ಣೆಯನ್ನು ಸಿಂಪಡಣೆ ಮಾಡಬೇಕು.
- ಗುಲಾಬಿ: ಕಬ್ಬಿಣದ ಕೊರತೆಯಿಂದ ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಅಥವಾ ಮಲ್ಟಿಪ್ಲೆಕ್ಸ್ ನ ಲಘು ಪೋಷಕಾಂಶಗಳನ್ನು ಕೊಡಬೇಕು.
- ತೊಗರಿಯಲ್ಲಿ ಸೊರಗು ರೋಗ ಇರುವ ಕಡೆ ಕಾರ್ಬೆಂಡೇಜಿಮ್ (೧ಮಿ.ಲೀ. ಪ್ರತಿ ಲೀಟರ್ ನೀರಿಗೆ) ತೊಗರಿ ಗಿಡದ ಬುಡದಲ್ಲಿರುವ ಮಣ್ಣಿಗೆ ಸೇರಿಸುವುದು.

ನೋಡಲ್ ಅಧಿಕಾರಿ

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು